<u>ಪಿಡಬ್ಲ್ಯೂ-1</u>

<u>ದಿನಾಂಕ: **21-08-2025** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ಪಾಟೀ ಸವಾಲು ಶ್ರೀ ಎಸ್.ಪಿ. ವಕೀಲರಿಂದ:-</u>

ನಾನು ಎಸ್.ಎಸ್.ಎಲ್.ಸಿ. ವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು **2009** ರಲ್ಲಿ ನಾನು ಹಾಗೂ ನನ್ನ ಮಕ್ಕಳು ನನ್ನ ಗಂಡ ನಮ್ಮನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂದು ಮತ್ತು ನನಗೆ ಗಂಡು ಮಕ್ಕಳು ಇಲ್ಲಾ ಎಂಬ ಕಾರಣಕ್ಕೆ ದೌರ್ಜನ್ಯ ಮಾಡಿದ್ದು ಆ ಬಗ್ಗೆ ಕೇಸು ಹಾಕಿದ್ದೆ. ಆ ಕಾರಣದಿಂದ ನ್ಯಾಯಾಲಯದ ಕಲಾಪಗಳು ಅಲ್ಪ ಸ್ವಲ್ಪ ಗೊತ್ತಿವೆ ಎಂದರೆ ಸರಿ. ಸಾಕ್ಷಿಗೆ ತಾನು ಆರೋಪಿತರ ಮನೆಯಲ್ಲಿ ಭೋಗ್ಯಕ್ಕೆ ಇದ್ದ ಬಗ್ಗೆ ಒಪ್ಪಿಕೊಂಡಿದ್ದು ಅದು ಪೆನ್ನಿನಿಂದ ಅಡ್ಡದಿಡ್ಡಿಯಾಗಿ ಹೊಡೆದು ಹಾಕಿದ್ದು ಅದನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-**1** ಎಂದು ಗುರುತಿಸಲಾಯಿತು. ಅದರಲ್ಲಿ ಬರೆದ ವಿಷಯ ಸರಿ ಇರುತ್ತದೆ. ಆ ಕರಾರಿನಂತೆ **3** ಲಕ್ಷ ರೂ.ಗಳ ಪೈಕಿ ನಾನು **2,90,000/-** ರೂ.ಗಳನ್ನು ಪಡೆದಿರುತ್ತೇನೆಂದರೆ ಸರಿ. ಆ ಕರಾರು ಪತ್ರದ ಪ್ರಕಾರ ಬಣ್ಣದ ಬಾಬ್ತು ಎಂದು **8,000/-** ರೂ. ಗಳನ್ನು ಆರೋಪಿತರು ಹಿಡಿದುಕೊಂಡಿರುತ್ತಾರೆಂದರೆ ಸರಿ. ಆರೋಪಿತರು ಕೇವಲ **2,000/-** ರೂ.ಗಳನ್ನು ಮಾತ್ರ ಕೊಡುವುದು ಬಾಕಿ ಉಳಿದಿತ್ತು ಎಂದರೆ ಸರಿ. ಮಾರ್ಚ್ ತಿಂಗಳಲ್ಲಿ ನನ್ನ ನಡವಳಿಕೆ ಸರಿ ಇಲ್ಲ ಎಂದು ಮನೆ ಖಾಲಿ ಮಾಡಲು ಆರೋಪಿತರು ಹೇಳಿದರು. ನಾನು ಮೇ ತಿಂಗಳಲ್ಲಿ ಮನೆ ಖಾಲಿ ಮಾಡಿರುತ್ತೇನೆಂದರೆ ಸರಿ. ನಾನು ಒಂದು ತಿಂಗಳ ವಿದ್ಯುತ್ ಚ್ಛಕ್ತಿ ಬಿಲ್ಲನ್ನು ಕಟ್ಟಿರಲಿಲ್ಲ ಎಂದರೆ ಸರಿ. ಬಣ್ಣದ ಬಾಬ್ತು ಹಾಗೂ ವಿದ್ಯುತ್ ಚ್ಛಕ್ತಿ ಬಿಲ್ಲಿನ ಪೈಕಿ ಆರೋಪಿತರು **10** ಸಾವಿರ ರೂ. ಹಿಡಿದುಕೊಂಡಿದ್ದರು ಅದನ್ನು ಕೊಡಿ ಎಂದು ಜಗಳ ಆಡಲು ಪ್ರಾರಂಭಿಸಿದೆನು ಎಂದರೆ ಸರಿಯಲ್ಲ. ದಿ:**30-05-2020** ರಂದು ಆರೋಪಿತರು ನನ್ನ ವಿರುದ್ದ ದೂರು ಸಲ್ಲಿಸಿರುತ್ತಾರೆಂದರೆ ಸರಿ. ಅವರು ದೂರು ಕೊಟ್ಟ ನಂತರ ನಾನು ಉದ್ದೇಶಪೂರ್ವಕವಾಗಿ ಆರೋಪಿತರ ವಿರುದ್ದ ಸುಳ್ಳು ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ. ನಾನು ನನ್ನದೂರಿನಲ್ಲಿ ಆರೋಪಿತರು ಇನ್ನು **10,000/-** ರೂ. ಕೊಡುವುದು ಬಾಕಿ ಇದೆ ಎಂದು ಹೇಳಿರುತ್ತೇನೆಂದರೆ ಸರಿ. **3**

ಮತ್ತು **4** ನೇ ಆರೋಪಿತರಿಗೆ **75-80** ವರ್ಷ ವಯಸ್ಸಾಗಿದೆ ಎಂದರೆ ಸರಿ. ಅವರಿಬ್ಬರಿಗೆ ವಯಸ್ಸಾಗಿದ್ದು ಅವರು ಕೆಲಸ ಕಾರ್ಯ ಮಾಡುವುದಿಲ್ಲ ಎಂದರೆ ಸಾಕ್ಷಿ ಗಲಾಟೆ ನಡೆಯುತ್ತಿದ್ದಾಗ ಅವರು ಬಂದಿರುತ್ತಾರೆಂದು ನುಡಿಯುತ್ತಾರೆ. ಘಟನೆ ದಿನ ನಾನು ಹುಟ್ಟಿದ್ದ ಸೀರೆಯನ್ನು ಪೋಲೀಸರು ವಶಪಡಿಸಿಕೊಂಡಿಲ್ಲ. ಘಟನೆ ಆದ ದಿನ ನನಗೆ ಬೆನ್ನು ನೋವು ಆಗಿದ್ದರಿಂದ ಅದೇ ದಿನ ಪೋಲೀಸ್ ದೂರು ಸಲ್ಲಿಸಲಾಗಲಿಲ್ಲ. ಘಟನೆಯಾದ **2** ದಿನಗಳ ನಂತರ ನಾನು ಅರಸೀಕೆರೆ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ವೈದ್ಯರ ಬಳಿ ನಾನು ಘಟನೆ ಬಗ್ಗೆ ಹೇಳಿಲ್ಲ ಆ ಘಟನೆಯಿಂದ ನನ್ನ ಬೆನ್ನಿಗೆ ಪೆಟ್ಟಾಗಿತ್ತು ಎಂದು ಹೇಳಿಲ್ಲ. ನಾನು **10** ಸಾವಿರ ಕೊಡಬೇಕೆಂದು ಆರೋಪಿತರನ್ನು ಕೇಳಿದಾಗ ಆರೋಪಿತರು ನಿಡಿ-**1** ನ್ನು ತೋರಿಸಿ ಅದರಂತೆ ಆ ಹಣವನ್ನು ಹಿಡಿದುಕೊಂಡಿರುತ್ತೇವೆಂದು ಹೇಳಿದಾಗ ನಾನೇ ಅದನ್ನು ಪೆನ್ನಿನಿಂದ ಗೀಜಿ ಅದರಲ್ಲಿರುವ ವಿಷಯವನ್ನು ಹೊಡೆದು ಹಾಕಲು ಪ್ರಯತ್ನಿಸಿರುತ್ತೇನೆಂದರೆ ಸರಿಯಲ್ಲ. ನಾನು, ನನ್ನ ಗಂಡ ಮತ್ತು ಮಕ್ಕಳು ಆರೋಪಿತರ ಜಾತಿ ನಿಂದನೆ ಮಾಡಿ ಅವರಿಗೆ ಬೆದರಿಸಿ ಹೆದರಿಕೆ ಹಾಕಿ ಹೋದೆವು ಎಂದರೆ ಸರಿಯಲ್ಲ. ಆ ರೀತಿ ಬೆದರಿಕೆ ಹಾಕಿದ್ದರಿಂದ **3** ಮತ್ತು **4** ನೇ ಆರೋಪಿತರ ಆರೋಗ್ಯದಲ್ಲಿ ಏರುಪೇರಾಗಿರುತ್ತದೆಂದರೆ ಸರಿಯಲ್ಲ. ಆ ಕಾರಣದಿಂದ **1** ದಿನ ತಡವಾಗಿ ದೂರು ಸಲ್ಲಿಸಿರುತ್ತಾರೆಂದರೆ ಸಾಕ್ಷಿ ದೂರು ಸಲ್ಲಿಸಿರುತ್ತಾರೆಂದು ನುಡಿಯುತ್ತಾರೆ. ಆ ಕಾರಣದಿಂದ ನಾನು ಸದರಿ ಸುಳ್ಳು ದೂರನ್ನು ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಘಟನೆ ಸಮಯದಲ್ಲಿ ನೀಲಗಿರಿಯಪ್ಪ, ಶಿವಣ್ಣ, ಮಂಜುನಾಥ ಇದ್ದರು. ಸದರಿ ಹಿರಿಯರು ಆ ಸಮಯದಲ್ಲಿ ಸಮಜಾಯಿಷಿ ಕಳುಹಿಸಿದ ಬಗ್ಗೆ ನನ್ನ ದೂರಿನಲ್ಲಿ ಹೇಳಿಲ್ಲ.

ಮಹಜರ್ ನ್ನು ಬೆಳಗ್ಗೆ **10-00** ಗಂಟೆಯಿಂದ ಅರ್ಧ ಗಂಟೆ ಕಾಲ ಮಾಡಿರುತ್ತಾರೆ. ಮಹಜರ್ ಜೊತೆ ಪೋಲೀಸರು ತೆಗೆದ ಕಚ್ಚಾ ನಕ್ಷೆಯಲ್ಲಿ ನಾನು ಸಹಿ ಮಾಡಿಲ್ಲ. ಆ ಸ್ಥಳದ ರಸ್ತೆಯ ಉದ್ದಳತೆಯನ್ನು ಪೋಲೀಸರು ಮಾಡಿರುತ್ತಾರೆ. ಗಲಾಟೆ ಸ್ಥಳದ ಚೆಕ್ ಬಂಧಿ ಹೇಳಲು ಬರುವುದಿಲ್ಲ. ಪೋಲೀಸರು ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಫೋಟೋ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ಕಾರಣದಿಂದ ಆರೋಪಿತರು ನನ್ನ ವಿರುದ್ಧ ದೂರು ಸಲ್ಲಿಸಿದ ನಂತರ ನಾನು ಉದ್ದೇಶಪೂರ್ವಕವಾಗಿ ಆರೋಪಿತರು ನನಗೆ ಯಾವುದೇ ತೊಂದರೆ ಕೊಡದೇ

ಇದ್ದರೂ ಅವರ ವಿರುದ್ದ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **21-08-2025.**